ಮಲಯಾಳಂ ಮೂಲ: ಕಮಲಾದಾಸ್
**ಕನ್ನಡಕ್ಕೆ: ಕೆ.ಕೆ. ಗಂಗಾಧರನ್**

# ಮಂತ್ರವಾದಿಯ ಮಗಳು



ಅವನು ಆ ಮನೆಯ ಸಮೀಪಕ್ಕೆ ಬರುವಷ್ಟರಲ್ಲಿ ಸಂಜೆ ಕಳೆದಿತ್ತು. ಊರಿನವರು ಹೇಳಿ ಹೇಳಿ ಪ್ರಚಾರ ಮಾಡಿದ ಒಂದೊಂದು ಕತೆಗಳನ್ನು ಯೋಚಿಸಿದಾಗ ಅವನೊಳಗೂ ಸ್ವಲ್ಪ ಭಯವುಂಟಾಯಿತು. ಆ ಕತೆಗಳೆಲ್ಲಾ ನಿಜವಿರಬಹುದೆ? ಅಲ್ಲವೆಂದಾದರೆ, ಈ ಗೋಡೆಗಳಿಗೆ ಹನ್ನೆರಡು ಅಡಿ ಎತ್ತರ ಉಂಟಾಗಿದ್ದಾದರೂ ಏಕೆ? ಈ ಬೃಹತ್ ಮುಖ್ಯದ್ವಾರದ ಮೇಲೆ ಕಬ್ಬಿಣದಿಂದ ನಿರ್ಮಿಸಿದ ಎರಡು ಹಾವುಗಳನ್ನು ಏಕೆ ಕೂರಿಸಬೇಕಿತ್ತು?

ಅವನು ಸ್ವಲ್ಪ ಅನುಮಾನದಿಂದ ನಿಂತ. ಅನಂತರ ಧೈರ್ಯವಾಗಿ, ಗೇಟನ್ನು ತಳ್ಳಿ ತೆರೆದು ತೋಟದ ಮೂಲಕ ಸಾಗುವ ಪುಡಿಗಲ್ಲ ರಸ್ತೆಯಲ್ಲಿ ನಡೆದು ಮನೆಯ ಮೊಗಸಾಲೆಯನ್ನು ತಲುಪಿದ. ಅದು ಹಳೆಯ ಎಂಟಂಕಣದ ಮನೆಯಾಗಿತ್ತು. ಮೊಗಸಾಲೆಯಲ್ಲಿ ಹನ್ನೆರಡು ಕಂಬಗಳಿದ್ದವು. ಮಾಳಿಗೆಯ ಒಳಮೈ, ತೊಲೆ, ಕಂಬಗಳ ಮೇಲಿನ ಭಾಗಗಳೆಲ್ಲಾ ಹಲವು ರೀತಿಯ ಕೆತ್ತನೆಗಳಿಂದ ಕೂಡಿದ್ದವು. ಹಳೆಯದಾದ್ದರಿಂದ ಅವುಗಳು ಕಪ್ಪಾಗಿ ಫಳಫಳಿಸುತ್ತಿದ್ದವು. ಮೊಗಸಾಲೆಯ ಬಾಗಿಲ ಬಳಿ ತೂಗು ಹಾಕಲಾಗಿದ್ದ ಹಳೆಯ ಎಣ್ಣೆದೀಪದ ಬತ್ತಿ ಸಣ್ಣನೆಯ ಗಾಳಿಗೆ ಓಲಾಡುತ್ತಿತ್ತು. ಅವನಿಗೆ ಗೋಡೆಯ ಮೇಲೆ ಕಂಡ ನೆರಳುಗಳನ್ನು ಸೂಕ್ಷ್ಮವಾಗಿ ನೋಡಲು ಭಯವುಂಟಾಯಿತು.

'ಇಲ್ಲಿ ಯಾರೂ ಇಲ್ವಾ?' ಅವನು ಗಟ್ಟಿಯಾಗಿ ಕೂಗಿದ. ಅದಕ್ಕೆ ಉತ್ತರವೇನೂ ದೊರೆಯಲಿಲ್ಲ. ಅವನು ಒಳಹೊಕ್ಕು, ಕತ್ತಲಿನ ಆ ಒಳದಾರಿಯಲ್ಲಿ ನಿಂತು ತನ್ನ ಸುತ್ತಲೂ ಕಣ್ಣಾಡಿಸಿದ. ಅದಕ್ಕೆ ಸುಮಾರು ಮೂವತ್ತು ಅಡಿಯಷ್ಟು ಉದ್ದವಿತ್ತು. ಮಧ್ಯೆ ಮಧ್ಯೆ, ಪ್ರತಿಯೊಂದು ಕೋಣೆಯೊಳಕ್ಕೆ ಹೋಗುವ ಬಾಗಿಲುಗಳಿದ್ದವು. ಆದರೆ ಎಲ್ಲೂ ಬೆಳಕಿರಲಿಲ್ಲ.

'ಯಾರಿದ್ದೀರಿ ಇಲ್ಲಿ?' ಅವನು ಪುನಃ ಕೇಳಿದ. ತನ್ನ ಧ್ವನಿ ಗೋಡೆಗಳಿಗೆ ಬಡಿದು ಅಪ್ರಿಯವಾದ ಪ್ರತಿಧ್ವನಿಯನ್ನುಂಟು ಮಾಡುತ್ತಿತ್ತೆಂದು ಅವನಿಗೆ ತೋರಿತು. ಇದ್ದಕ್ಕಿದ್ದಂತೆ ಯಾರೋ ಏಣಿ ಮೆಟ್ಟಿಲುಗಳನ್ನು ನಿಧಾನಕ್ಕೆ ಇಳಿದು ಬರುತ್ತಿರುವ ಸದ್ದು ಕೇಳಿಸಿತು. ತನ್ನ ಮುಂದೆ ಒಳದಾರಿಯ ಅಂಚಿನಲ್ಲಿ ಏಣಿಮೆಟ್ಟಿಲು ಪ್ರಾರಂಭವಾಗುತ್ತದೆಂಬ ವಿಷಯ ಆಗ ಅವನಿಗೆ ತಿಳಿಯಿತು. ಯಾರೋ ದೀಪವನ್ನು ಹಿಡಿದು ಕೆಳಗಿಳಿಯುತ್ತಿದ್ದರು. ಅವನು ಸೂಕ್ಷ್ಮವಾಗಿ ಗಮನಿಸಿದ. ವೃತ್ತಾಕೃತಿಯ ಹಳದಿ ಬೆಳಕಿನಲ್ಲಿ, ಮೊದಲು ಎರಡು ಬಂಗಾರದ ಪಾದಗಳು ಮತ್ತೆ ಬಿಳಿಯ ಮುಂಡಿನಿಂದ ಮುಚ್ಚಿದ ಕಾಲುಗಳನ್ನು ಅವನು ಕಂಡ. ಅವಳು ಕೆಳಮಹಡಿಯನ್ನು ತಲುಪಿದಳು. ಬಂಗಾರದ ಬಣ್ಣದ ಹದಿನೇಳರ ಹರೆಯದ ತರುಣಿ. ಅವಳ ದೇಹ ಬಂಗಾರದ ಶಿಲ್ಪದಂತೆ